Registered No. M. 1393

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ಸಂಪುಟ ೨೩ | ಮಂಗಳೂರು, ೧೯೪೨ನೇ ಇಸವಿ ಮಾರ್ಚಿ ತಾರೀಕು ೨೦ನೇ ಶುಕ್ರವಾರ | ಸಂಖ್ಯೆ
VOL. XXIII | MANGALORE, FRIDAY, MARCH 20, 1942 | NO.

ಯುದ್ಧದಲ್ಲಿ ಭಾರತ ನರೇಂದ್ರರ ಸಹಾಯ

ನರೇಂದ್ರ ಮಂಡಲದಲ್ಲಿ ವೈಸರಾಯರ ಭಾಷಣ

ಡಿಲ್ಲಿಯಲ್ಲಿ ಮಾನ್ಯ ವೈಸರಾಯರು ನರೇಂದ್ರ ಮಂಡಲದ ವಾರ್ಷಿಕೋತ್ಸವದಲ್ಲಿ ಮಾತಾಡುತ್ತ "ಭಾರತದ ವಿಪತ್ತಿನ ಈ ಪರೀಕ್ಷಾ ಸಮಯದಲ್ಲಿ ಇಂಡಿಯಕ್ಕೆ ಜಯವನ್ನು ಒದಗಿಸಿಕೊಡುವುದು ಭಾರತ ನರೇಂದ್ರರ, ಅವರ ಪ್ರತಿನಿಧಿಗಳ ಮೇಲೆ ಬಿದ್ದಿರುವ ಜವಾಬುದಾರಿಯಾಗಿದೆ" ಎಂದರು.

ಈಚಿಗೆ ಒಂದು ವರ್ಷದಲ್ಲಿ ಗತಿಸಿದ ಕೆಲ ಮಹಾರಾಜರ ವಿಚಾರದಲ್ಲಿ ಸಂತಾಪ ಸೂಚಿಸಿ, ಈ ಮಂಡಲದ ಚಾನ್ಸಲರ್ ಮತ್ತು ವೈಸ್ ಚಾನ್ಸಲರರ ಸೇವೆಯನ್ನು ಪ್ರಶಂಸಿಸಿ, ಭಾರತ ದೇಶಿಯ ಸಂಸ್ಥಾನಗಳ ಮುಂದಿರುವ ನಾನಾ ಸಮಸ್ಯೆಗಳ ಕುರಿತು ಪ್ರಸ್ತಾವಿಸಿದರು. ಇದಕ್ಕೆ ಮೊದಲು ತಾವು ಈ ಮಂಡಲಕ್ಕೆ ಮಾಡಿದ್ದ ಸೂಚನೆಗಳನ್ನು ಸ್ಮರಣೆಗೆ ತಂದುಕೊಟ್ಟರು. ಮುಖ್ಯವಾಗಿ ಸಣ್ಣ ಸಂಸ್ಥಾನಗಳು ಆಡಳಿತದ ವಿಚಾರದಲ್ಲಿ ಒದುಗೂಡಿ ವರ್ತಿಸುವ ಅಂಶವನ್ನೆತ್ತಿ ಂಡು, ಅದರಲ್ಲಿ ಆಗಬೇಕಾದಷ್ಟು ಬಲಾವಣೆಗಳು ಆಗಲಿಲ್ಲವೆಂದರು. ಿಕ್ಕ ವಯಸ್ಸಿನ ರಾಜರ ಆಡಳಿತೆಯ ಸಂಬಂಧದ ಕಾರ್ಯನೀತಿಯನ್ನು ರೂಪಿಸುವ ಕೆಲಸವಿನ್ನೂ ಹಾಗೆಯೇ ಉಳಿದಿದೆ ಎಂದರು. ಇದಕ್ಕಾಗಿ ಮಂತ್ರಿಗಳ ಒಂದು ಕಾರ್ಯಾಲೋಚನೆಯ ಮಂಡಲಿ ಅಗತ್ಯವೆಂದರು. ಅರಸರು ತಮ್ಮ ಮತ್ತು ರಾಜಕುಟುಂಬದ ಖರ್ಚಿಗಾಗಿ ರಾಜ್ಯಾದಾಯದ ಎಷ್ಟು ಅಂಶವನ್ನು ತೆಗೆದಿರಿಸಿಕೊಳ್ಳಬೇಕೆಂಬ ವಿಷಯವನ್ನು ಎತ್ತಿ ಕೊಂಡು, ಅದರಲ್ಲಿ ಔದಾರ್ಯಪೂರ್ವಕವಾದ ದೃಷ್ಟಿಯನ್ನಿರಿಸಿಕೊಂಡು ಧೈರ್ಯದಿಂದ ಕೆಲಸ ನಡೆಸುತ್ತಿರುವ ಕೆಲವು ರಾಜರನ್ನು ಹೊಗಳಿದರು.

ದೇಶೀಯ ಸಂಸ್ಥಾನದ ಅರಸರು ಯುದ್ಧಕಾರ್ಯಕ್ಕೆ ಇದುವರೆಗೆ ನೀಡಿದ ಸಹಾಯಕ್ಕಾಗಿ ವೈಸರಾಯ ಪ್ರಭುಗಳು ಅವರನ್ನೆಲ್ಲ ವಂದಿಸಿದರು. ಕಳೆದ ೧೨ ತಿಂಗಳಲ್ಲಿ ಯುದ್ಧವು ನಮ್ಮ ಹೆಬ್ಬಾಗಿಲಿನ ಬಳಿಯಲ್ಲೇ ಗದ್ದಲವಾಡುತ್ತಿದ್ದು ನಾವೆಲ್ಲರೂ ಹೆಚ್ಚಿನ ತ್ಯಾಗವನ್ನು ಮಾಡುವುದು ಅಗತ್ಯವಾಗಿತ್ತು ಎಂದರು. ಈ ಸಂದರ್ಭದಲ್ಲಿ ಭಾರತ ನರೇಂದ್ರರು ಉತ್ಸಾಹದಿಂದ ಮುಂದೊತ್ತಿ, ಶಕ್ತಿವಂಚನೆ ಇಲ್ಲದೆ, ಭಾರತದ ಯುದ್ಧ ಪ್ರಯತ್ನದ ಪ್ರತಿಯೊಂದು ಶಾಖೆಯಲ್ಲಿಯೂ ಸಮಾಚೀನವಾದ ಸಹಾಯ ಮಾಡಿರುವುದೂ ಅಲ್ಲದೆ, ಹಲವು ಮುಂದಿ ಅರಸರು ನಾನಾ ರಣರಂಗಗಳ ಸೇನೆಗಳನ್ನು ಸಂದರ್ಶಿಸಿ ಅವರನ್ನೆಲ್ಲ ಹುರಿದುಂಬಿಸಿರುವುದೂ ಸ್ಮರಣೀಯವಾಗಿದೆ ಎಂದು ಕೊಂಡಾಡಿದರು. ಇನ್ನು ಮುಂದೆಯೂ ಈ ದೇಶೀಯ ಸಂಸ್ಥಾನಗಳು ತಕ್ಕ ಜನಧನಬಲಗಳನ್ನು ಕೊಟ್ಟು ಯುದ್ಧ ಪ್ರಯತ್ನಕ್ಕೆ ನೆರವಾಗುವುವೆಂದು ಭರವಸೆ ಸೂಚಿಸಿದರು.

ಬ್ರಿಟಿಷ್ ಇಂಡಿಯದ ಯುದ್ಧ ಪ್ರಯತ್ನಗಳೊಡನೆ ದೇಶೀಯ ಸಂಸ್ಥಾನಗಳು ತಮ್ಮ ಕೈ ಜೋಡಿಸತಕ್ಕ ಆವಶ್ಯಕತೆ ಮತ್ತು ರೀತಿನೀತಿಗಳು ಯಾವುವೆಂಬ ಕುರಿತು ವೈಸರಾಯರು ಶ್ರುತಪಡಿಸಿ ರಕ್ಷಣಾಕಾರ್ಯಗಳಲ್ಲಿ ದೇಶೀಯ ಸಂಸ್ಥಾನಗಳ ಸಹಕಾರವೆಷ್ಟು ಮಟ್ಟಿಗೆ ಪ್ರಧಾನವಾಗಿರುವುದೆಂದು ಸೂಚಿಸಿ, ಸರ್ವೀಸುಗಳ ಸ್ಥಿತಿಗತಿಗಳ ಪ್ರಮಾಣವನ್ನು ತಿಳಿಯಪಡಿಸಿದರು. ಸೇನೆಗಳು ಕಡಿಮೆಯಾಗದೆ ಭರ್ತಿಯಾಗುತ್ತಲೇ ಇರುವಂತೆ ಏರ್ಪಾಡುಗಳಾಗಬೇಕೆಂದೂ, ಸಮರ್ಥರಾದ ಯುವಕರು ಸೇನೆಗಳನ್ನು ನಡೆಸುವಂತೆ ರಣ ಶಿಕ್ಷಣವನ್ನು ಪಡೆಯಬೇಕೆಂದೂ, ಈಗಿನ ಯುದ್ಧ ಕಾರ್ಯದಲ್ಲಿ ಉಚ್ಚ ತರಗತಿಯ ಶಿಕ್ಷಣವು ಅಗತ್ಯವೆಂದೂ, ಒಳದೇಶದ ರಕ್ಷಣೆಯ ಏರ್ಪಾಡುಗಳೂ ಆಗತಕ್ಕುವೇ ಎಂದೂ ದೃಢಕಾಯನಾದ ಪ್ರತಿಯೊಬ್ಬನೂ ಈ ದೇಶದ ಶತ್ರುವನ್ನು ಹೊಡೆದಟ್ಟುವ ಕಾರ್ಯದಲ್ಲಿ ನೆರವಾಗಬೇಕಾಗಿದೆ ಎಂದೂ ವ್ಯಕ್ತಗೊಳಿಸಿದರು.

ರಾಷ್ಟ್ರೀಯ ಯುದ್ಧ ಮುಖ

"ರಾಷ್ಟ್ರೀಯ ಯುದ್ಧ ಮುಖ"ಕ್ಕೆ ನೃಪೇಂದ್ರರ ಸಹಕಾರವೂ, ಬೆಂಬಲವೂ ಅಗತ್ಯವಿದೆ. "ರಾಷ್ಟ್ರೀಯ ಯುದ್ಧ ಮುಖ"ದ ಉದ್ದೇಶಗಳೇನೆಂದರೆ–ಜನತೆಯ ನೈತಿಕ ಮನೋಧರ್ಮವನ್ನು ಕಾಪಾಡುವಂತೆ ಸಹಕರಿಸುವುದು; ಆ ಧರ್ಮವನ್ನು ಕೆಡಿಸಲುಳ್ಳ ಯಾವತ್ತು ವಿದ್ಯಮಾನಗಳನ್ನೂ ಪ್ರತಿಭಟಿಸುವುದು; ಪಂಚಮ ದಳದ ಯಾವತ್ತು ಬಗೆಯ ಚಟುವಟಿಕೆಗಳನ್ನೂ ಕಂಡಲ್ಲಿ ನಿರ್ಮೂಲಿಸಲು ಯತ್ನಿಸುವುದು; ಅಪಜಯದ ಮನೋವೃತ್ತಿಯನ್ನು ಸೂಚಿಸಬಹುದಾದ ಯಾವತ್ತು ವದಂತಿ, ಲೇಖನ ಇತ್ಯಾದಿಗಳನ್ನು ತಡೆವುದು; ನಾಜಿಯಿಜಮ್ ನಿರ್ಮೂಲವಾಗುವ ವರೆಗೂ ಆ ದ್

(೬ನೇ ಪುಟಕ್ಕೆ ಮುಂದುವರಿಯಿರಿ)

ದಿ ಕ್ರಿಸೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಇವರಿಗೆ ದಕ್ಷಿಣ ಕನ್ನಡಕ್ಕೆ ಆರ್ಗನೈಜರ್ಸ್ ಬೇಕಾಗಿದ್ದಾರೆ. ಈ ವಿಮಾ ಕಂಪೆನಿಯ ಸುಪರಿಂಟೆಂಡೆಂಟರು ಈ ಜಿಲ್ಲೆಯನ್ನು ಎಪ್ರಿಲ್ ತಿಂಗಳ ಪ್ರಥಮ ವಾರದಲ್ಲಿ ಸಂದರ್ಶಿಸಲಿರುವರು. ಪ್ರಾತಿನಿಧ್ಯ ವಹಿಸಲಿಚ್ಛಿಸುವವರನ್ನು ಅವರ ಸ್ಥಳದಲ್ಲೇ ಸಂದರ್ಶಿಸಲಾದೀತು. ನಿಮ್ಮ ಹಿಂದಿನ ಅನುಭವ, ಪಹಿವಾಟಿನ ಗೆರಂಟಿ ಮುಂತಾದುವನ್ನು ನಮೂದಿಸಿ ಕಂಪೆನಿಯ ಮುಖ್ಯ ಕಾರ್ಯಾಲಯಕ್ಕೆ ಬರಕೊಳ್ಳಿ:—

The Crescent Insurance Co. Ltd.,

(ESTD. 1919)

FORT: BOMBAY.

ಬೆನ್ನು ನೋವಿನಿಂದ ಜೀವನವು ಅತಿ ದುಃಖಾವಸ್ಥೆಯಲ್ಲಿತ್ತು

ನೋವು ಬಹಳ ತೀಕ್ಷ್ಣವಾಗಿದ್ದು ಅವಳು ನಡೆಯುವುದೇ ಕಷ್ಟವಾಯಿ

ಮೂರು ವರ್ಷಗಳ ಕಾಲ ಭಯಂ ವೇದನೆ ಹಾಗೂ ಕೊನೆಗೆ–ದಿನ್ಯ ಉಪಶಮ ವೇದನೆಗೊಳಗಾದ ಇತರರಿಗೆ, ತಾನು ಹ ಆರೋಗ್ಯ ಹೊಂದಿದೆನೆಂದು ತಿಳಿಸಬೇಕಾದ ತನ್ನ ಕರ್ತವ್ಯವೆಂದು ಅವಳು ತಿಳಿಯುತ್ತಾ ಅವಳು ತನ್ನ ಈ ಕಾಗದದಲ್ಲಿ ತನ್ನ ಆ ಚರಿತ್ರೆಯನ್ನು ಹೇಳುತ್ತಾಳೆ:—

"ಮೂರು ವರ್ಷಗಳಿಗೆ ಮೇಲ್ಪಟ್ಟು ವಾತಶೂಲೆ ಮತ್ತು ಬೆನ್ನು ನೋವಿನಿಂದ ಸಂಕಟ ಪಡುತ್ತಿದ್ದ ನಾನು ಹೇಗೆ ಎರಡು ಬಾಟಲಿ ಕ್ರುಶ್ಮನ್ ಸಾಲ್ಟ್ಸ್ ಸೇವನೆಯಿಂದ ಪೂರ್ಣ ಗುಣ ಹೊಂದಿದೆನೆಂದು ನಿಮಗೆ ಹೇಳಬೇಕಾದುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ನಾನು ಆಸ್ಪತ್ರೆಯಲ್ಲಿ ಲವು ಕಾಲವಿದ್ದೆ, ವಿದ್ಯುತ್‌ಶಾಕ ಚಿಕಿತ್ಸೆಯಾಯಿತು; ಆದರೆ ಕ್ರುಶ್ಮನ್ ಸಾಲ್ಟ್ಸ್‌ನ ವಿಷಯ ಓದಿ ತಿಳಿಯುವ ತನಕ ಹಾಗೂ ಅದರ ಸೇವನೆಯ ಮೊದಲು ಯಾವುದೂ ಗುಣಕಾರಿಯಾಗಲಿಲ್ಲ. ಮೊದಲು ಮನೆಯೊಳಗೆ ಹರಿದಾಡಲು ಸಾಧ್ಯವಿಲ್ಲದ ನನಗೆ ಈ ದಿನಕ್ಕೆ ಮೂರು ಮೈಲು ನಡೆಯಬಹುದಾಗಿದೆ. ನಿಜವಾಗಿಯೂ ಕ್ರುಶ್ಮನ್ ಆತ್ಯಾಶ್ಚರ್ಯಕಾರಿಯಾಗಿದೆ"– ಮಿಸೆಸ್) ಎ ಎನ್.

ಮೂತ್ರ ಪಿಂಡಗಳು ದೇಹ ರಚನೆಗೆ ಫಿಲ್ಟರಿನಂತಿವೆ. ಇವು ಜಡವಾಗಿದ್ದರೆ, ದೇಹದಲ್ಲಿ ಮಲಿನತೆ ಸಂಚಯಗೊಂಡು, ಇದು ರಕ್ತನಾಳವನ್ನು ಸೇರುತ್ತದೆ. ಕ್ರುಶ್ಮನ್‌ನಲ್ಲಿರುವ ಆರು ಲವಣಗಳು, ಮೂತ್ರ ಪಿಂಡಗಳನ್ನು ಆರೋಗ್ಯಕ್ಕೆ ತಂದಿಟ್ಟು, ಇವುಗಳ ಕ್ರಮವಾದ ಕೆಲಸದಿಂದ ರಕ್ತನಾಳಗಳಲ್ಲಿ ಸೇರಿದ ವಿಷಮಯವಾದ ಪ್ರತಿ

ಯೊಂದು ಮಲಿನ ಪದಾರ್ಥದ ಕಣವನ್ನು ಹೊರಹಾಕುವಂತೆ ಮಾಡುತ್ತದೆ. ಕ್ರಿಪ್ರ ಪರಿಣಾಮವಾಗಿ, ಇದರ ಸೇವನೆಯಿಂದ ಆತಂಕಪಡಿಸುವ ಬೇನೆಯಿಂದ ಉಪಶಮನದ ಅನುಭವವಾಗುತ್ತದೆ.

ನೆಯ ದಿವಸವೇ
ನ್ನ ನರಗಳನ್ನು
ತೆ ಸಂತವಿಸಿತು

NG'S
ast-Vite
TONIC TABLETS

ಧಿರುವುಹಕ್ಕೂ, ನಿದ್ರೆ ಬಾರದಿರು
ರ್ಣಕ್ಕೂ ತಲೆನೋವಿಗೂ,
ಾದಕ್ಕೂ, [ಹಿಸ್ಟೀರಿಯ]
ಸೆಯಿಂದ ಯೀಸ್ಟ್-ವೈಟ್
ಳನ್ನು ಶಿಫಾರ್ಸು ಮಾಡು

ಒಂದು ಕಾಲದಲ್ಲಿ ಮಿಥ್ಯೋನ್ಮಾದ
ನಾಶ ಮತ್ತು ಇತರ
ೂ ಕಷ್ಟಪಡುತ್ತಿದ್ದೆನು.
ಣವೇನೂ ಆಗದಿರಲು
ೀಸ್ಟ್-ವೈಟ್ ಟೇಬ್ಲೆಟ್
ದರು. ಒಂದು ಟೇಬ್ಲೆಟ್
ರಲ್ಲೇ ಒಳ್ಳೇ ಫಲ ಕಂಡಿತು.
ವಸವೇ ದಣಿದ ನನ್ನ ನರಗಳನ್ನು
ನೇಕ ವಾರಗಳಿಂದ ನನಗೆ ಒಳ್ಳೇ
ಆ ದಿವಸ ರಾತ್ರಿ ಚೆನ್ನಾಗಿ ನಿದ್ರೆ
ಮೂರನೆಯ ದಿವಸ ನನ್ನ ದೇಹವೆಲ್ಲಾ
ಸಲಸವಾಡಲು ಪ್ರಾರಂಭಿಸಿತು.
ನಗೆ ಮೇಲಾಯಿತು.
ಯೀಸ್ಟ್ ಟೇಬ್ಲೆಟ್‌ಗಳ ಸಹಾಯ
ಮೇಗ ಏನೂ ಚಿಂತೆಯಿಲ್ಲ. ಈಗ ನಾನು
ನ್ನು ಉಪಯೋಗಿಸುತ್ತೇನೆ, ಮತ್ತು
ರಿಗೂ ನಿದ್ರೆಬಾರದವರಿಗೂ ಅಜೀರ್ಣ
ವರಿಗೂ, ತಲೆನೋವಿನಿಂದ ಭಾದೆಪಡು
, ಮಿಥ್ಯೋನ್ಮಾದದಿಂದ (ಹಿಸ್ಟೀರಿಯ) ಕಷ್ಟ
ವರಿಗೂ ನಾನು ಯೀಸ್-ವೈಟನ್ನು ಪೂರ್ಣ
ಸೆಯೊಡನೆ ಶಿಫಾರ್ಸು ಮಾಡುವೆನು.
ಇತಿ, (ಮಿಸೆಸ್) ಜಿ. ಟಿ.

ಇದರ ರಹಸ್ಯ
ಯೀಸ್ಟ್-ವೈಟ್‌ನ ಅಪಾರ ಶಕ್ತಿಯ ರಹಸ್ಯ
ಅದರೆ ಅದು ವೈಟಾಮಿನ್ 'ಬಿ' ತುಂಬಿ
ಸ್ವಚ್ಛವಾದ ಔಷಧಯುಕ್ತ ಯೀಸ್ಟ್
ಇತರ ಅಮೂಲ್ಯ ಶಕ್ತಿವರ್ಧಕ ಔಷಧಿ
ಪ್ರಾಮುಖ್ಯ ವೈದ್ಯರು ಹೇಳಿದಂತೆ ಶಾಸ್ತ್ರ
ಲಿ ಬಹಳ ಜಾಗರೂಕತೆಯಿಂದ ಔಷಧ
ಯಾರಾಗಿದೆ. ಯೀಸ್ಟ್-ವೈಟ್ ಅತಿ
ಪ್ರವಾಗಿ ಫಲಸುವ ಶಕ್ತಿವರ್ಧಕ ಔಷಧ.

ಗುಣವಿಲ್ಲವೋ—ದುಡ್ಡು ಬೇಡ

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ನಮ್ಮ "ಗುಣವಿಲ್ಲವೋ—ದುಡ್ಡು ಬೇಡ" ಯೆನ್ನುವ ಯೋಜನೆಯನ್ನು ಯಾವಾಗಲಾದರೂ ಪರೀಕ್ಷಿಸಿದ್ದೀರಾ? ನೀವು ಬಳಲಿ ಬೆಂಡಾಗಿದ್ದರೂ, ತಲೆನೋವಿನಿಂದ ನರಳುತ್ತಿದ್ದರೂ, ವಾತಗ್ರಸ್ತರಾಗಿದ್ದರೂ, ಅಥವಾ ಯಾವ ಕಾರಣದಿಂದಲಾದರೂ ಸರಿಯೇ ಉತ್ಸಾಹರಹಿತರಾಗಿದ್ದರೂ ಔಷಧ ವ್ಯಾಪಾರಿಯಿಂದಲೋ ಅಥವಾ ಸ್ಟೋರಿನಿಂದಲೋ ಒಂದು ಶೀಸೆ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲೆಟ್‌ಗಳನ್ನು ತರಿಸಿಟ್ಟುಕೊಳ್ಳಿ. ಕ್ಲುಪ್ತ ರೀತಿಯಲ್ಲಿ ಸೇವಿಸಿರಿ. ನೀವು ಪೂರ್ಣ ತೃಪ್ತಿ ಹೊಂದದಿದ್ದರೆ ಖಾಲೀ ಪ್ಯಾಕೇಟನ್ನು "ಗ್ಯಾರೆಂಟ್ ಸೀಲ್" ಸೊಡನೆ ನಮಗೆ ಕಳುಹಿಸಿ. ನಿಮ್ಮ ಹಣವು ನಿಮಗೆ ಪೂರಾ ವಾಪ್ತಾಸುಮಾಡಲ್ಪಡುವುದು. ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಮತ್ತು ಸ್ಟೋರ್‌ಗಳಲ್ಲಿಯೂ ಇರ್ವಿಂಗ್ಸ್ ಯೀಸ್ಟ್-ವೈಟ್ ಟೇಬ್ಲೆಟ್‌ಗಳು ದೊರೆಯುವುವು. ಸೋಲ್ ಮ್ಯಾನುಫ್ಯಾಕ್ಚರರ್ಸ್:
ಇರ್ವಿಂಗ್ಸ್ ಯೀಸ್ಟ್-ವೈಟ್ ಲಿಮಿಟೆಡ್,
ವಾಟ್‌ಫರ್ಡ್, ಇಂಗ್ಲಾಂಡ್.

ಶ್ರೀ ಧನಲಕ್ಷ್ಮಿ ಸ್ನಫ್ ವರ್ಕ್ಸ್,
(ಪ್ರೊ:— ಎ. ಶಿವಪ್ಪ ಬಂಗೇರ)
ಮಾರ್ಕೆಟ್ ರೋಡು, ಮಂಗಳೂರು.
ಇಲ್ಲಿ ಒಳ್ಳೆ ಉತ್ತಮ ನಶ್ಯತಯಾರಿಸಲ್ಪಡುತ್ತದೆ.
ಒಮ್ಮೆ ಬಂದು ಪರೀಕ್ಷಿಸಿರಿ.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc. You are cordially invited to utilize these facilities.

CANARA BANK, LIMITED.
ESTD: 1906.

ಕಂಠೀರವ
KANTEERAVA
KANARESE, BI-WEEKLY

XXIII] ಮಂಗಳೂರು, ತಾರೀಕು ೨೦—೩—೧೯೪೨ [೧೦೧
೧೮೬೪ ಚಿತ್ರಭಾನು ಸಂವತ್ಸರದ ಚೈತ್ರ ಶು| ೪ ಶುಕ್ರವಾರ

ಬೇಸಿಗೆಯ ಯುದ್ಧದ ಪರಿ ಏನು?

ಯುದ್ಧದ ಪರಿಸ್ಥಿತಿಯ ಕುರಿತಾಗಿ ಆಗಾಗ ಅವರಿವರ ಭಾಷಣಗಳನ್ನು ಕೇಳುತ್ತಿರುವ ನಾವು, ಈಚೆಗೆ ಇಬ್ಬರು ಸಮರ ಮುಖಂಡರ ಭಾಷಣಗಳನ್ನೂ ಕೇಳಿದ ಹಾಗಾಯಿತು. ಅವೆರಡೂ ಅವುಗಳ ಮಟ್ಟಿಗೆ ಪ್ರಾಮುಖ್ಯವಾಗಿಯೇ ಇವೆ. ಬರುವ ಬೇಸಿಗೆಯಲ್ಲಿ ವಿಜಯ ಸಿದ್ಧಿಗಾಗಿ ಎಕ್ಸಿಸ್ ರಾಷ್ಟ್ರಗಳು ಮಹತ್ಪ್ರಯತ್ನವನ್ನು ಮಾಡುವ ಕಾಲದಲ್ಲಿ, ಅದರ ಸ್ವಭಾವವೆಂತದಾಗಿರಬಹುದೆಂದೂ ಈ ಭಾಷಣಗಳಿಂದ, ಒಂದು ರೀತಿಯಲ್ಲಿ, ಪ್ರತಿಧ್ವನಿ ಬರುತ್ತಿದೆ.

ಅಮೆರಿಕದಲ್ಲಿನ ರಷ್ಯದ ರಾಯಭಾರಿಗಳಾದ ಎಂ. ಲಿಟ್ವಿನೋವ್‌ರವರು ಈಚೆಗೊಂದು ಭಾಷಣವನ್ನು, ನ್ಯೂಯಾರ್ಕಿನಲ್ಲಿ ಮಾಡಿದರು; ಅಂತೇ ಈಚೆಗೆ ಹಿಟ್ಲರ್ ಮಾಡಿದ ಒಂದು ಭಾಷಣವನ್ನೂ ನಾವು ಕೇಳಿದೆವು. ಇವೆರಡನ್ನೂ ಹೋಲಿಸಿನೋಡಿದಲ್ಲಿ, ರಷ್ಯದ ರಾಯಭಾರಿಗಳ ಭಾಷಣದಲ್ಲಿ, ತಮ್ಮ ವಿಜಯಸಿದ್ಧಿ ಖಂಡಿತವೆಂದು ಸೂಚಿಸಲ್ಪಟ್ಟಿರುವಾಗ, ಹಿಟ್ಲರರ ಭಾಷಣದಲ್ಲಿ, ಹಿಂದೆಂದೂ ಕಾಣದ, ತಕ್ಕಡಿಯಲ್ಲಿ ತೂಗುವ ಆಶಾವಾದದ ಲಕ್ಷಣಗಳು ಮಾತ್ರ ಕಂಡುಬರುತ್ತಿವೆ. ಅದರಲ್ಲಿ, ಮೊದಲಿನಂತೆ, ಆ ಅಬ್ಬರದ ಉಬ್ಬರವಿಲ್ಲ; ಹೆಮ್ಮೆಯ, ಸೊಕ್ಕಿನ, ಪಟಾಟೋಪದ ಬಣ್ಣ ಬಿನ್ನಾಣಗಳಿಲ್ಲ. ಒಂದು ವೇಳೆ, ಪೂರ್ವ ರಂಗದಲ್ಲಿ ಜರ್ಮನ್ ಸೇನೆಗಳಿಗೊದಗಿದ ತೇಜೋವಧೆಯಿಂದ, ಹಿಟ್ಲರನ ತಲೆ, ಬುದ್ಧಿಗಳು ಕೊಂಚ ಶಾಂತವಾಗಿದ್ದರೂ ಇರಬಹುದು! ಆದುದರಿಂದಲೇ, ಅವನ ಈಚೆಗಿನ ಆ ಭಾಷಣದಲ್ಲಿ, ಎಲ್ಲದಕ್ಕಿಂತಲೂ ಹೆಚ್ಚಾಗಿ, ಜರ್ಮನರ ಸೋಲು ಮತ್ತು ತೇಜೋವಧೆಗಳಿಗೆ ಯಾವುದು ಕಾರಣಗಳೆಂಬ ಈ ವಿವರಣೆಯ ಭಾಗಕ್ಕೇ, ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದರೂ ಅದೇನೂ ಆಶ್ಚರ್ಯವಲ್ಲವೆನ್ನಿ. ವಸ್ತುತಃ, ಹಿಟ್ಲರ್, "ಜರ್ಮನ್ ಸೇನೆಗಳಿಗೆ ಎಪರೀತ ನಷ್ಟವಾಗಿದೆ" ಎಂದು ಒಪ್ಪಿಕೊಂಡಿರುವುದು ಇದೇ ಪ್ರಥಮ ಬಾರಿ! ಮತ್ತೆ ಅವನು "ರಷ್ಯದ ಸೈನಿಕರ ಎದುರಾಗಿ, ಇಷ್ಟೊಂದು ಮಂದಿ ಜರ್ಮನರನ್ನು, ಅಲ್ಲಿ ಬಲಿಕೊಟ್ಟುದು, ಮಿಲಿಟರಿಯ ದೃಷ್ಟಿಯಿಂದ ಎಹಿತವೋ, ಅಲ್ಲವೋ ಎಂಬುದನ್ನು, ಇತಿಹಾಸವೇ, ಇನ್ನು ಕೆಲವು ತಿಂಗಳೆಲ್ಲೇ ನಿರ್ಧರಿಸುವುದು" ಎಂಬೀ ಉದ್ಗಾರ ಸುರಿಸಿರುವುದನ್ನು ನೋಡಿದರೆ, ಹಿಟ್ಲರಿನ ಈಗಿನ ವಿಜಯ ಮನೋರಥದ ಪರಿ ಹೇಗಿದೆ ಎಂದು ತಿಳಿಯದಿರದು.

ಅಷ್ಟೇ ಅಲ್ಲ; ಹಿಟ್ಲರಿನ ಅದೇ ಆ ಮಾತು, ಜರ್ಮನಿಯಲ್ಲಿ ಉಂಟಾಗಿರುವ ಆ ಅಪಾರ ಅಶಾಂತಿಯ ಸೂಚನೆ ಎಂದೂ ನಾವು ತಿಳಿಯಬಹುದಾಗಿದೆ. ಮಿ। ಲಿಟ್ವಿನೋವ್ ಅವರು ಅಂದಂತೆ, ಜರ್ಮನರು ಈಚೆಗೆ ರಷ್ಯದಲ್ಲಿ ಯಾವ ದೊಡ್ಡ ನಗರವನ್ನೂ ಹಿಡಿಯಲು ಶಕ್ತರಾಗದೆ, ತಾವೇ ಹಿಂದೆ ಸರಿದಿರುವುದೂ, ಹಿಟ್ಲರಿನ ಹಿಂದಿನ ಭವಿಷ್ಯದಂತೆ, ರಷ್ಯದವರನ್ನು ಜರ್ಮನರು ಇಷ್ಟರಲ್ಲೇ ನಿರ್ಧೂಳಿಮಾಡಲು ಅಸಮರ್ಥರಾದುದೂ ಜರ್ಮನಿಯಲ್ಲಿ ನಿಜವಾಗಿಯೂ ಬಹಳ ಅಸಮಾಧಾನ ಹುಟ್ಟಿಸಿರಬೇಕು! ಆದುದರಿಂದ ಬೇಸಿಗೆಯ ಅವನ ದಾಳಿಯೂ ಬಹಳ ಉಗ್ರವಾಗಿಯೇ ನಡೆದೀತೆಂಬುದೂ ನಿರ್ವಿವಾದ ಆದುದರಿಂದ, ಮಿತ್ರರು ಇನ್ನೂ ಹಿಂದಿನಂತೆ ಕಾಯದೆ, ಅವರು ರಷ್ಯದ ಮೇಲೆ ಬೀಳುವ ಹಂಚಿಕೆ ಹಾಕಬೇಕೆಂದೂ, ಜರ್ಮನರಿಗಾಗಿ ಇನ್ನೊಂದು ಸಮರಾಂಗಣವನ್ನು ಸಿದ್ಧಪಡಿಸಬೇಕೆಂದೂ ಮಿ। ಲಿಟ್ವಿನೋವ್‌ರ ಸೂಚನೆ. ಇದನ್ನು ಮಿತ್ರರು ಯಾವ ರೀತಿ ಮನ್ನಿಸುವರೆಂದು ಬೇಗನ್ನೇ ತಿಳಿಯದಿರದು.

ಮಂಗಳೂರು ಮುನಿಸಿಪಲ್ ಕೌನ್ಸಿಲು

ಈ ಮುನಿಸಿಪಲ್ ಕೌನ್ಸಿಲು ಕಳೆದ ಸೋಮವಾರ ಸಂಜೆ ಅದರ ಕಾರ್ಯಾಲಯದಲ್ಲಿ ಚೆಯರ್‌ಮ್ಯಾನ್ ಶ್ರೀ। ಬಿ. ವೆಂಕಟರಾವ್ ಬಾಳಿಗಾ ಎಂ. ಎಲ್. ಏ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕ್ರೈಸ್ತಸಾದರಿಗಳಿಗೆ ವೃತ್ತಿತೆರಿಗೆ ವಿಧಿಸಬೇಕೆಂಬ ಸರಕಾರಿ ಹುಕುಮನ್ನು ರಿಕಾರ್ಡ್ ಮಾಡಲಾಯಿತು; ಪೆಂಟ್‌ಲ್ಯಾಂಡ್‌ಪೇಟೆಯ ಅಂಗಸಾಧನೆಯ ಮಂದಿರಕ್ಕೆಂದು ೧ ಸಾವಿರ ರೂಪಾಯಿ ಮಂಜೂರಾಯಿತು; ಮುನ್ಸಿಪಲ್ ಪ್ರಾವಿಡೆಂಟ್ ಫಂಡಿನಿಂದ ರೂ. ೬ ಸಾವಿರವನ್ನು, ಇಂಡಿಯಾ ಸರಕಾರದ ಡಿಫೆನ್ಸ್ ಬಾಂಡುಗಳಲ್ಲಿ ವಿನಿಯೋಗಿಸಬಹುದೆಂದು ಸೂಚಿಸಿದ್ದ ಕಮಿಶನರರ ಅರಿಕೆಗೆ ಪ್ರತಿಯಾಗಿ, ಆ ಪೊತ್ತವನ್ನು, "ಸೆ. ಲ್ಯಾಂಡ್ ಮೊರ್ಗೆಜ್ ಬೇಂಕ್, ಮದ್ರಾಸ್" ಇದರಲ್ಲಿ ವಿನಿಯೋಗಿಸಬೇಕೆಂದು ಕೌನ್ಸಿಲು ನಿರ್ಧರಿಸಿತು; ಮುನ್ಸಿಪಾಲಿಟಿಯಲ್ಲಿ ಈಗಿರುವ ಬೆಂಕಿಯಾರಿಸುವ ಯಂತ್ರವು ನಿತ್ಯವೂ ಮುನ್ಸಿಪಾಲಿಟಿಗಾಗಿ ಉಪಯೋಗವಾಗುತ್ತಿರುವುದರಿಂದ, ಅದನ್ನು ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರ ವಶಕೊಡಬೇಕೆನ್ನುವ ಜಿಲ್ಲಾ ಮ್ಯಾಜಿಸ್ಟ್ರೇಟರ ಅರಿಕೆಯು ಮನ್ನಿಸಲ್ಪಡಲು ಅನಾನುಕೂಲವೆಂದೂ, ಫಲ್ಗುಣೀರು ಟೌನ್ ಪ್ಲಾನಿಂಗಿನಲ್ಲಿ ಉಳಿತಾಯವಾಗಿರುವ ೧೧ ಸಾವಿರ ರೂಪಾಯಿಗಳಿಂದ, ಇನ್ನೊಂದು ಬೆಂಕಿಯಾರಿಸುವ ಯಂತ್ರವನ್ನು, ಆರ್. ಪಿ. ಉದ್ದೇಶಗಳಿಗಾಗಿ, ಮುನ್ಸಿಪಾಲಿಟಿ ಕೊಳ್ಳುವಂತೆ, ಆ ಪೊತ್ತದ ವಿನಿಯೋಗಕ್ಕಾಗಿ ಸರಕಾರವನ್ನು ಪ್ರಾರ್ಥಿಸಬೇಕೆಂದೂ ನಿರ್ಧಾರವಾಯಿತು; ಈ ಮುನಿಸಿಪಾಲಿಟಿಯ ಎಕ್ಸೈಜ್ ಲೈಸನ್ಸಿಂಗ್ ಬೋರ್ಡಿನ ಪ್ರತಿನಿಧಿ ಸದಸ್ಯರಾಗಿ ಶ್ರೀ। ಎಂ. ಆರ್. ಭಟ್ಟರನ್ನೇ ತಿರುಗಿ ಜುನಾಯಿಸಲಾಯಿತು. ಮಂಗಳೂರು ವೋರ್ಕ್‌ಕನರ್ಸ್ ವೆನ್ಸಿ ಬೋರ್ಡಿನವರು ಈ ಮುನಿಸಿಪಾಲಿಟಿಯ ಒಬ್ಬ ಪ್ರತಿನಿಧಿ ಆ ಬೋರ್ಡಿನಲ್ಲಿ ಅಗತ್ಯವಿಲ್ಲವೆಂದರೂ, ಆ ಪ್ರಾತಿನಿಧ್ಯದ ಅಗತ್ಯವಿದೆ ಎಂದು ಒತ್ತಾಯಿಸುವಂತೆ ನಿರ್ಣಯಿಸಲಾಯಿತು. ಮುನ್ಸಿಪಲ್ ಕೌನ್ಸಿಲು ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ (ರೂ. ೧೦೦ ರೊಡನೆ) ಕೊಟ್ಟಿದ್ದ ಹೆಚ್ಚಿಗಿನ ರೂ. ೨೦೦ರ ಗ್ರಾಂಟನ್ನು ವಿದ್ಯಾಂಗದ ಡೈರೆಕ್ಟರರು ಮಂಜೂರು ಮಾಡಲಿಲ್ಲವೆಂಬ ವಿಚಾರವನ್ನು ಕೌನ್ಸಿಲು ರಿಕಾರ್ಡ್ ಮಾಡಿತು.

ವಿದೇಶ—ಹಿಂದೂದೇಶ

ಮಿತ್ರರು ಮರುದಾಳಿ ಹೂಡುವರೇ?

ನ್ಯೂಯಾರ್ಕಿನ ಒಂದು ಸಮಾರಂಭ ಕಾಲದಲ್ಲಿ ಅಮೆರಿಕದ ಬ್ರಿಟಿಷ್ ರಾಯಭಾರಿಗಳಾದ ಲಾರ್ಡ್ ಹಾಲಿಫಾಕ್ಸರು, "ಮಿತ್ರರು ಮರುದಾಳಿ ಹೂಡುವ ಕುರಿತು" ಪ್ರಸ್ತಾಎಸಿದರು; ಅಲ್ಲಿನ ರಷ್ಯದ ರಾಯಭಾರಿಗಳಾದ ಎಂ. ಲಿಟ್ವಿನೋವ್ ಅವರು, ಜರ್ಮನರ ವಿರುದ್ಧವಾಗಿ, ಇನ್ನೊಂದು ರಣರಂಗವನ್ನು ನಿರ್ಮಿಸುವ ಅಗತ್ಯದ ಕುರಿತಾಗಿಯೂ ಸೂಚಿಸಿದರು.

ರಾಷ್ಟ್ರಪತಿಗಳ ಹೇಳಿಕೆ

ರಾಷ್ಟ್ರಪತಿ ಮೌಲಾನಾ ಅಜದರು ನಾಗ್ಪುರದ ಕಾಂಗ್ರೆಸ್ ಕೆಲಸಗಾರರನ್ನು ಉದ್ದೇಶಿಸಿ ಮಾತಾಡುತ್ತ "ನನ್ನ ರಕ್ತವನ್ನು ಚೆಲ್ಲಿಯಾದರೂ, ವಿದೇಶೀಯರ ಜಗಳಗಂಟತನದ ವಿರುದ್ಧವಾಗಿ ಕಾದಾಡಿ ನನ್ನ ಮಾತೃಭೂಮಿಯನ್ನು ಕಾಪಾಡದಿರಲಾರೆ" ಎಂದರು. ಜಗಳಗಂಟತನವನ್ನು ಎಲ್ಲರೂ ಪ್ರತಿಭಟಿಸಬೇಕೆಂದರು.

ದ. ಕ. ಜಿಲ್ಲಾ ಕಾಂ॥ ಕಮಿಟಿಯ ಅಧ್ಯಕ್ಷರು

ಕಳೆದ ೪ ವರ್ಷಗಳಿಂದ ಈ ಜಿಲ್ಲಾ ಕಾಂ॥ ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀ॥ ಯು. ಶ್ರೀನಿವಾಸ ಮಲ್ಯರು, ಆ ಸ್ಥಾನಕ್ಕೆ ಕಾರಣಾಂತರಗಳಿಂದ ರಾಜೀ ಕೊಟ್ಟಿದ್ದರೂ, ಹಲವರ ಒತ್ತಾಯದಂತೆ ತಿರುಗಿ ಆ ಸ್ಥಾನವನ್ನು ಸ್ವೀಕರಿಸಲು ಒಪ್ಪಿ, ಹಾಗೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಹೊಸದಾಗಿ ಒಂದು ಕಾರ್ಯಕಾರಿ ಮಂಡಲಿಯೂ ಚುನಾಯಿಸಲ್ಪಟ್ಟಿತು.

ನಿಮಗೆ ಮುಂಬಾಯಿಯಿಂದ ಏನಾದರೂ ಸಮಾಚಾರ ಬೇಕೇ?

ವ್ಯಾಪಾರಸ್ಥರಿಗೂ ಮತ್ತಿತರರಿಗೂ ಮುಂಬಾಯಿಯಿಂದ ಯಾವತ್ತೂ ವಿಧದ ವಿಶ್ವಾಸಾರ್ಹವಾದ ಸಮಾಚಾರವನ್ನು ಕೂಡಲೋಸುಗವಾಗಿ ಮುಂಬಾಯಿಯ ಸುಪ್ರಸಿದ್ಧ ನೇಶನಲ್ ಅಡ್ವರ್ಟಾಯಿಜಿಂಗ್ ಸರ್ವಿಸಿನವರು ಪ್ರತ್ಯೇಕ ಒಂದು ಶಾಖೆಯನ್ನು ನೇಶನಲ್ ಇನ್‌ಫೊರ್ಮೇಶನ್ ಬ್ಯೂರೊ, ಪಿ. ಓ. ಬೋಕ್ಸ್ 511, ಮುಂಬಾಯಿ ಎಂಬ ಅಭಿದಾನದಿಂದ ತೆರೆದಿರುವರೆಂದು ನಮ್ಮ ವಾಚಕರಿಗೆ ತಿಳುಹಲು ನಮಗೆ ಸಂತೋಷವಾಗುತ್ತಿದೆ. ಸಾಮಾನ್ಯ ವಿಚಾರಗಳ ಬಗ್ಗೆ ವಿಚಾರವೊಂದರ ಎಂಟಾಣೆಯಂತೆ ಅವರ ಚಾರ್ಜು ಮಾಡುವರು. ಈ ಮೊಬಲಗನ್ನು ಅವರಿಗೆ ಅಂಚೆ ಚೀಟಿನ ಮೂಲಕ ವಿಚಾರದೊಂದಿಗೆ ಕಳುಹತಕ್ಕದ್ದು. ಈ ಮೊಬಲಗು ಟಪ್ಪಾಲು ಮತ್ತಿತರ ತನಿಕಿ ಬಗ್ಗೆ ಜಿಗಿರುತ್ತದೆ.

ನೇಶನಲ್ ಇನ್‌ಫೊರ್ಮೇಶನ್ ಬ್ಯೂರೊ, ಪಿ. ಓ. ಬೋಕ್ಸ್ 511, ಮುಂಬಾಯಿ ಇವರು ಕೊಡುತ್ತಿರುವ ಸೇವೆಯನ್ನು ಸರ್ವರೂ ಉಪಯೋಗಿಸಿಕೊಳ್ಳಬೇಕೆಂದು ನಾವು ನಮ್ಮ ವಾಚಕರಿಗೆ ತಿಪ್ಪಾಸಿ ಮಾಡುತ್ತೇವೆ. ವಾಚಕರು ನಮ್ಮ ಪತ್ರಿಕೆಯ ಹೆಸರನ್ನು ಸೂಚಿಸಿದಲ್ಲಿ ಅವರಿಗೆ ತಕ್ಷಣ ಉತ್ತರ ಸಿಗುವ ಭರವಸೆಯಿದೆ



ನಾನಾ ರಣರಂಗಗಳು

ಬರ್ಮಾದ ಮಧ್ಯರಂಗದಲ್ಲಿ ವಿಶೇಷ ವಿಲ್ಲ; ಜಪಾನೀಯರು ಬೇಸ್ಸಿನ್ ತಮ್ಮ ವಶವಾಯಿತೆನ್ನುತ್ತಾರೆ; ಮೇಲಿನ ಸಿಟಾಂಗ್ ನದಿ ಪ್ರಾಂತದಲ್ಲಿ, ಹಿಂದು ಸ್ಥಾನದ ಸೇನೆಗಳು, ಷಿಗ್ವಿನ್ ನಗರವನ್ನೂ ೩ ಹಳ್ಳಿಗಳನ್ನೂ ಜಪಾನರ ಕೈಯಿಂದ ತಿರುಗಿ ಕಿತ್ತುಕೊಂಡಿದ್ದಾವೆ; ಮುಂದಿನ ಘೋರ ಯುದ್ಧಕ್ಕೆ ಬ್ರಿಟಿಷ್–ಜಪಾನಿ ಬಲಗಳೆರಡೂ ಅಲ್ಲಿ ಸಿದ್ಧವಾಗುತ್ತಿವೆ. ಡಾರ್ವಿನ್ ಬಂದರದ ಮೇಲೆ ಜಪಾನರು ತಿರುಗಿ ಬಾಂಬು ಹಾಕಿದ್ದಾರೆ; ಕೇಪ್ ಯಾರ್ಕಿನ ಬಳಿ ಬಂದು ವಿಮಾನಗಳ ಕಾದಾಟ ನಡೆದಿದೆ. ಅಮೆರಿಕದವರು ರಾಬೌಲ್ ದ್ವೀಪಗಳ ಮೇಲೆ ಬಾಂಬು ಹಾಕಿದ್ದಾರೆ; ರಷ್ಯದವರು ಸಾವ್ಲೆನಸ್ಕ್ ಮತ್ತು ಕಾಖೋವ್‌ಗಳ ಬಳಿ ನುಗ್ಗುತ್ತ, ಜರ್ಮನರ ಹಲವು ಕೋಟೆ ಕೊತ್ತಲಗಳ ಪ್ರದೇಶಗಳನ್ನು ಹಿಡಿದಿದ್ದಾರೆ.

ಹಿಟ್ಲರಿನ ಭಾಷಣ

ಹಿಟ್ಲರ್ ಬರ್ಲಿನಿನಲ್ಲಿ ಒಂದು ಭಾಷಣ ಮಾಡುತ್ತ ರಷ್ಯದಲ್ಲಿ ಜರ್ಮನರ ಪರಾಭವಕ್ಕೆ ಕಾರಣವೇನೆಂದು ವಿವರಿಸಿದನು. ರಷ್ಯದ ಅಸಾಧ್ಯ ಚಳಿಗಾಲ, ರಷ್ಯದವರ ಹೊಸ ಸೇನೆ, ಪ್ರತಿಭಟನೆ ಇತ್ಯಾದಿಗಳ ಕುರಿತು ಶ್ರುತಪಡಿಸಿದನು.

ಸಿಲೋನಿನ ರಕ್ಷಣೆ

ಈಗಿನ ಪರಿಸ್ಥಿತಿಯಲ್ಲಿ ಸಿಲೋನನು "ಸರ್ವ ಸೇನಾಪತಿ" ಯೊಬ್ಬನ ವಶವಿರಿಸುವ ಅಗತ್ಯ ಕಂಡು ಬಂದು ಆ ಸ್ಥಾನಕ್ಕೆ ವೈಸ್ ಎಡ್ಮಿರಲ್ ಸರ್ ಜೊಫ್ರಿ ಲೆಯ್‌ಟನ್‌ನವರನ್ನು ಆರಿಸಲಾಗಿದೆ.

ನೆಲ್ಲೂರಲ್ಲಿ

ಇಲ್ಲಿ ತೆಲುಗು ಹೊಸ ವರ್ಷದಂದು, ಒಂದು ಉತ್ಸವದ ಮೆರವಣಿಗೆ, ಪೋಲೀಸರ ಬಂದೋಬಸ್ತಿನೊಡನೆ ಬೀದಿಗಳಲ್ಲಿ ತಿರಳುತ್ತಿದ್ದಾಗ, ಕೊಂಚ ಗಲಭೆಯಾಗಿ ಪೋಲೀಸರು ಗೋಳಿಬಾರು ಮಾಡಬೇಕಾಗಿ ಬಂದು ಅದರಿಂದ ಒಬ್ಬ ಮುಸ್ಲಿಂ ಹುಡುಗ ಸತ್ತ; ೫ ಮಂದಿ ಮುಸ್ಲಿಮರಿಗೆ ಗಾಯಗಳಾಗಿವೆ.

ಎರು
ಸ್ಕೌಟ್
ಸಮಯೇಶನ್
ೀಶನಿನವರು ಮುಂದೆ
ಮತ್ತು ತಾರೀಕು
ಗ್ ಕ್ಯಾಂಪುಗಳನ್ನು
ರು:—ಎಪ್ರಿಲ್
ಕೂರಲ್ಲಿ ಕಬ್
ಿಲ್ ತಾ. ೧೬
ದಾಪುರದಲ್ಲಿ ಕಬ್
ಎಪ್ರಿಲ್ ತಾ. ೨೧
ಣ್ಣುಮಕ್ಕಳ
ಪ್ರಿಲ್ ತಾ.
ಲ್ಲಿ ಸ್ಕೌಟ್
ಲ. ರಿಂದ ೧೨
ಟೋವರ್ಸ್‌ಗಾಗಿ.
ಲ್ಲಿ ಮೇ ತಾ. ರಿಂದ
ರಕ ಶಿಕ್ಷಣದ ತರ
ುಂದನ್ನೂ ಈ ಸಂಘ
ರು.

ಸೂಪ್ಪರ್,
ಮ್ಯಾಸ್ಟರೆ ನೇಮಕ
ಶ್ರೀ. ಪಿ. ಸದಾಶಿವ
ಕೇಂದ್ರ ಮಿ. ಎಸ್.
ರ್‌ಡೋ; ಉಡ್ಪಿ ಮುನಿಸಿ
ಶ್ರೀ. ಲಕ್ಷ್ಮೀನಿಧಿ ರಾವ್;
ಮುನಿಸಿಪಾಲಿಟಿ ಮಿ. ಜೆ.
ಂದಾಪುರ ಡಿವಿಜನ್ ಶ್ರೀ.
ಂದ ರಾಯ ಕಾಮತ್;
ಡು ಶ್ರೀ. ಕೆ. ಎಶಲ

ೋರ್ಡ್ ಮೀಟಿಂಗ್
ರುವ ಮಾರ್ಚಿ ತಾ. ೨೦ನೇ
ಗ್ಗೆ ಗಂಟೆ ೧೦ಕ್ಕೆ ಸ್ಥಳೀಯ
ರ್ಡ್ ಆಫೀಸಿನಲ್ಲಿ ಈ
ಬೋರ್ಡ್ ಮೆಂಬರರ ಮೀಟಿಂಗ್
ಡೆಯುವುದು. ಆ ಮೀ ಟಿಂ ಗಿ ನ ಲ್ಲಿ
ರ್ಚಿಗೆ, ಆಲೋಚನೆಗೆ ಬರುವ ವಿಷಯ
ಳು ಸುಮಾರು ೫೭. ಜಿ॥ ಬೆ॥
ಮೀಟಿಂಗುಗಳಿಗೆ ಕ್ರಮವಾಗಿ ಬಾರದೆ

ಹಾಗೆ ಬೋರ್ಡ್ ಮೆಂಬರಿಕೆಯನ್ನು ನೀಗಿಕೊಂಡವರ ವಿಚಾರ, ಬೈಂದೂರು–ಗಂಗಾನದದ ರಸ್ತೆಯನ್ನು (ಇದಕ್ಕೆ ಸುಮಾರು ರೂ. ೧೨ ಸಾವಿರ ಖರ್ಚಾಗ ಬಹುದು) ಮೈಸೂರು ಗಡಿಗಳ ವರೆಗೆ ಬೋರ್ಡ್ ವಿಸ್ತರಿಸಬೇಕೆನ್ನುವ ವಿಚಾರ, ಭಟ್ಕಳದಿಂದ ಈ ಜಿಲ್ಲೆಗೆ ಪ್ಲೇಗ್ ಹಬ್ಬ ದಂತೆ ಪ್ಲೇಗ್ ಸಬಂದಿಯನ್ನೇರ್ಪಡಿಸುವ ವಿಚಾರ, ಜಿಲ್ಲೆಯ ಹೈಸ್ಕೂಲುಗಳ ಖರ್ಚಿನ ಬಾಬ್ತಿನಲ್ಲಿ ಚಾಲ್ತಿ ವರ್ಷ ರೂ ಮುಂದಿನ ವರ್ಷಗಳಲ್ಲಿ ರೂ ೧೦ ಸಾವಿ ರದಂತೆ ಪ್ರತಿ ವರ್ಷ ಉಳಿಸುವ ವಿಚಾರ, ಬೊ॥ ಹಾಯರ್ ಎಲಿಮೆಂಟರಿ ಶಾಲೆಗ ಳಿಗೆ ವಿಜ್ಞಾನ ಶಾಖೆಯ ಮತ್ತು ಇತರ ಉಪಕರಣಗಳನ್ನು ಒದಗಿಸಲು ಮಂಜೂರಾದ ರೂ. ೩೭೦೦ಗಳ ವಿಚಾರ,—ಇವೆಲ್ಲವೂ ಆ ಎಟಿಂಗಿ ನಲ್ಲಿ ಪರ್ಯಾಲೋಚನೆಗೆ ಒಳಗಾಗು ವುವು.

ಯುದ್ಧ ಪ್ರಚಾರಕಾರ್ಯದ ಸಬ್ ಕಮಿಟಿ

ಕಳೆದ ಸೋಮವಾರ ಸಂಜೆ ಸ್ಥಳೀಯ ಕೆನರಾ ಕ್ಲಬ್ಬಿನಲ್ಲಿ, ನಮ್ಮ ಜಿಲ್ಲಾ ಕಲೆಕ್ಟರ್ ಮಿ. ಎಂ. ಕರಮತುಲ್ಲ ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ, ಯುದ್ಧ ಪ್ರಚಾರಕಾರ್ಯದ್ದ ಸಬ್ ಕಮಿ ಟಿಯ ಪುನರ್ ವ್ಯವಸ್ಥೆಗಾಗಿ ಆಲೋಚನೆ ನಡೆದು, ಮಾನ್ಯ ಮುಂಗಳೂರಿನ ಬಿಶೋ ಪರು ಆ ಉಪಸಮಿತಿಯ ಅಧ್ಯಕ್ಷರಾ ಗಿಯೂ, ಮಿ. ಅಬ್ದುರ್ ರಹಿಂ ಆಹಮದ್ ರವರು ಅದರ ಕಾರ್ಯದರ್ಶಿಗಳಾ ಗಿಯೂ ಇರುವಂತೆಯೂ; ಕಮಿಟಿಯಲ್ಲಿ ಆವರಿಬ್ಬರು ಸದಸ್ಯರಲ್ಲದೆ, ಎಂ॥ ಸಿ. ಎಲ್. ಲೋಬೋ, ಜಿಲ್ಲಾ ವಿದ್ಯಾಧಿಕಾರಿಗಳು, ರಾ॥ ಬ॥ ಕೆ. ಟಿ. ಆಳ್ವ, ರಾ॥ ಬ॥ ಎಸ್. ಎನ್. ಸುವರ್ಣ, ಜಿಲ್ಲಾ ಹೆಲ್ತ್ ಆಫಿ ಸರ್ ಜಿ॥ ಲೇಬರ್ ಆಫಿಸರ್, ಡಾ. ಎಂ. ಕೇಶವ ಪೈ, ಶ್ರೀ. ಕೆ. ಯಶವಂತ ರಾವ್, ಬಿ॥ ಕೆ. ಆರ್. ಕರುಣಾಕರ, ರಾ॥ ಸಾ॥ ರಂಗನಾಥ ಪೂಂಜ ಇವರಿಷ್ಟು ಮಂದಿಯೂ ಇತರ ಸದಸ್ಯರಾಗಿರುವಂ ತೆಯೂ ನಿರ್ಧರಿಸಲಾಯಿತು.

ಯಕ್ಷಗಾನ ಸಮಾರಂಭ

ಭಾರತ ದೇಶದ ಸಂರಕ್ಷಣೆಯ ಸಹಾಯಕ್ಕಾಗಿ ಇದೇ ಎಪ್ರಿಲ್ ತಾ. ೪ನೇ ಶನಿವಾರ ರಾತ್ರೆ ೯ರಿಂದ ೧೨–೩೦ರ ವರೆಗೆ ಸ್ಥಳೀಯ ಗೌ॥ ಕಾಲೇಜಿನಲ್ಲಿ ನಮ್ಮ ಜಿಲ್ಲಾ ಜಡ್ಜರಾದ ಶ್ರೀ। ಎಲ್. ಎಸ್. ಪಾರ್ಥಸಾರಥಿ ಅಯ್ಯರರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ "ಕರ್ಣನ ಪ್ರತಾಪ" ವೆಂಬ ಯಕ್ಷಗಾನ ಸಮಾರಂಭ ಜರುಗಲಿದೆ. ಶ್ರೀ। ಬಲಿಪ ನಾರಾಯಣ ಭಾಗವತರು, ಶ್ರೀ।ಗಳಾದ ಕೆಮ್ಮಣ್ಣು ನಾರ್ಣಪ್ಪಯ್ಯನವರು ಮೃದಂಗ, ಕೆ. ಪಿ. ವೆಂಕಪ್ಪ ಸೆಟ್ಟರು ಕರ್ಣ, ಎಡ್ವೊಕೆಟ್ ಕೆ. ಬಾಲಕೃಷ್ಣರಾವ್ ಶಲ್ಯ, ಅ. ಸುಬ್ರಾಯಾಚಾರಿಗಳು ಕೃಷ್ಣ, ಪಿ. ಶಂಕರನಾರಾಯಣ ಶಾಸ್ತ್ರಿಗಳು ಅರ್ಜುನ. ಪ್ರವೇಶ ಟಿಕೆಟಿನ ಮೂಲಕ.

ಫರಂಗಿಪೇಟೆ ಶ್ರೀ ರಾಮಾ ಹಾ॥ ಎ॥ ಶಾಲಾ ವರ್ಷ ವರ್ಧಂತಿ

ಈ ಶಾಲೆಯ ೨೫ನೆಯ ವರ್ಷ ವರ್ಧಂತಿ ಇದೇ ತಾ. ೨೬ನೇ ಗುರು ವಾರ (ರಾಮನವಮಿ) ಸಂಜೆ ದ. ಕ. ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿಗಳಾದ ವಿದ್ವಾನ್ ಶ್ರೀ. ಎಚ್. ರಾಮರಾವ್, ಎಂ. ಎ. ಎಲ್. ಟಿ., ಬಿ. ಒ. ಎಲ್. ಅವರ ಅಧ್ಯಕ್ಷತೆಯಲ್ಲಿ, ನಾನಾ ಮನೋ ಹರ ಕಾರ್ಯಕ್ರಮಗಳೊಡನೆ ಜರು ಗುವುದು. ಅಂದು ಶ್ರೀ. ಎನ್. ಸದಾ ಶಿವ ಶೆಣೈ ಅವರು "ಶಾಲಾಭಿನಂದನ" ಮೂಡುವರು; ಅದರೊಂದಿಗೆ ದಿವಂಗತ ಶ್ರೀ. ಸುಜೀರು ಪದ್ಮನಾಭ ನಾಯ್ಕರ ಭಾವಚಿತ್ರ ಅನಾವರಣ ಮಹೋತ್ಸವವೂ ಜರುಗಲಿದೆ.

ಮುಲ್ಕಿ

ಸ್ಥಳೀಯ ಸಂಟರಿನ ಉಪಾಧ್ಯಾಯರ ಸಂಘದ ಚಾಲ್ತಿ ವರ್ಷದ (೪೧–೪೨) ಕಡೇ ಸಭೆಯು ಈಚೆಗೆ ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಿ ಬಂತು. ಶ್ರೀ। ಕೆ. ಪಿ. ಕಾಮತ್ ರವರು ಸಭಾಧ್ಯಕ್ಷರಾಗಿದ್ದರು. "ಸಂಗೀ ತವನ್ನು ಕಡ್ಡಾಯವಾಗಿ ಏಕೆ ಕಲಿಸ ಬೇಕು?" ಎಂಬ ವಿಷಯದ ಮೇಲೆ ಶ್ರೀ। ಯಚ್. ಶೀನ ಶೆಟ್ರ ಉಪನ್ಯಾಸ, ಮಕ್ಕಳಿಂದ ರಾಮಾಯಣ ವಾಚನ, ವಿವಿಧ ರೀತಿಯ ನಾಟ್ಯ, ಕಾರ್ಯಕಾರಿ ಮಂಡಳಿ ನೇಮಕ, ಸಭಾಧ್ಯಕ್ಷರ ಭಾಷಣ, ಇತ್ಯಾದಿ ಕಾರ್ಯಕ್ರಮಗಳು ಜರುಗಿ ದುವು. ಮುಂದಿನ ಸಭೆ ತಾ. ೧೩–೬–೪೨ ನೇ ಶನಿವಾರ ಪೂರ್ವಾಹ್ನ ಘಂಟೆ ೯ಕ್ಕೆ ಸ್ಥಳೀಕ ಬೋರ್ಡು ಎಲಿಮೆಂಟರಿ ಶಾಲೆ ಯಲ್ಲಿ ಜರಗಲಿರುವುದು.

ಸ್ಥಳೀಕ ಬೋರ್ಡು ಹುಡುಗಿಯರ ಶಾಲೆಯ ಕಲಮಂದಿ ಉಪಾಧ್ಯಾಯಿನಿ

"ಈ ದಿವಸ ನಿನ್ನ ಹಲ್ಲುಗಳನ್ನು
ಮ್ಯಾಕ್‌ಲೀನ್
ಮಾಡಿದೆಯಾ?"

"ಅಹಾ! ನೀನು ಬುದ್ಧಿವಂತಳೇ ಸರಿ,
ಈ ಸಣ್ಣ ಹುಡುಗಿಯನ್ನು ನೋಡಿ ಬುದ್ಧಿ ಕಲಿತುಕೊಳ್ಳಿ. ಮ್ಯಾಕ್‌ಲೀನ್ ಪೆರಾಕ್ಸೈಡ್ ಟೂತ್ ಪೇಸ್ಟ್ ನಿಂದ ನಿಮ್ಮ ಹಲ್ಲುಗಳು ಬೆಳ್ಳಗೆ ಮಿಂಚುವಂತೆಯೂ, ಹಲ್ಲಿನಗಾರೆ ಗಟ್ಟಿಯಾಗಿ ಆರೋಗ್ಯಯುತವಾಗಿಯೂ ಮತ್ತು ಬಾಯಿ ಜೊಕ್ಕಟವಾಗಿಯೂ ಮತ್ತು ಇಂಪಾಗಿಯೂ ಆಗುತ್ತದೆ. ಆದೇ ನಿಮಗೆ ಬೇಕಾದ ಟೂತ್ ಪೇಸ್ಟ್—ಬೆಳಿಗ್ಗೆಯಾದರೂ ರಾತ್ರೆಯಾದರೂ ಸರಿ.



ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸ್ಟೋರ್‌ಗಳಲ್ಲಿ ಮಾರಲ್ಪಡುತ್ತದೆ.

ಯರು ಸುಮಾರು ೬೦ ಹೆಮ್ಮಕ್ಕಳನ್ನು ಕೂಡಿಕೊಂಡು, ಈಚೆಗೆ ಫಲಿಮಾರಿಗೆ ಪರ್ಯಟನಕ್ಕೆ ತೆರಳಿರಲ್ಲು, ಶ್ರೀ ಫಲಿ ಮಾರು ಮಠದಲ್ಲಿ ಅವರೆಲ್ಲಿ ಗೂ ಊಟೋ ಪಚಾರಗಳನ್ನು ಮಾಡಿಸಿ, ನೆರೆಲ್ಲರನ್ನು ಅತ್ಯಾದರದಿಂದ ಸತ್ಕರಿಸಿದ ಶ್ರೀ ಫಲಿ ಮಾರು ಮಠಾಧಿಕಾರಿಗಳ ಔದಾರ್ಯವು ಪ್ರಶಂಸನೀಯವಾಗಿದೆ.

ಮಕ್ಕಳ ಕಲಜ ಮತ್ತು ಗುಲ್ಮ ರೋಗಗಳಿಗೆ
ಸುಪ್ರಸಿದ್ಧ ಡಾಕ್ಟರುಗಳು ಇದನ್ನೇ ಉಪಯೋಗಿಸುತ್ತಿರುವರು.

ಜಮ್ಮಿಯವರ
ಕರ್ಪೂರ
ಇದಕ್ಕೆ ಸಮಾನತೆಯುಳ್ಳದ್ದು ಇನ್ನೊಂದಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ದೊರೆಯುವುದು.
ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್
1/1 ಬ್ರಾಡೀಸ್ ರೋಡ್, ವೈಲಾಪುರ, ಮದ್ರಾಸು.
ಅಲ್ಲದೆ, ಮುಂಬಯಿ, ಕಲ್ಕತ್ತಾ, ಲಕ್ನೋ, ಬೆಂಗಳೂರು ಮತ್ತು ತಿರುಚಿನಾಪಳ್ಳಿ.

ಬಟ್ಟೆಗಳನ್ನು ಜೊಕ್ಕಟವಾಗಿ ಒಗೆಯಲು
೫೦೧ ಸ್ಪೆಷಲ್ ಸಾಬೂನು
ಉಪಯೋಗಿಸಿ.
★ ಬಟ್ಟೆಗಳನ್ನು ಶುಭ್ರವಾಗಿ ಒಗೆಯುತ್ತದೆ.
★ ನಾಜೂಕಾದ ಬಟ್ಟೆಗಳಿಗೆ ಹಾನಿಯಾಗುವುದಿಲ್ಲ.
★ ಮನೆಯಲ್ಲಿ ಬಟ್ಟೆಗಳನ್ನು ಒಗೆಯುವುದು ಸುಲಭಸಾಧ್ಯ.



ಟಾಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್
2 A, ಸೌತ್ ಪೆರೇಡ್, ಬೆಂಗಳೂರು.
ದಿ ತಾತಾ ಆಯಿಲ್ ಮಿಲ್ಸ್ ಕಂ., ಲಿ., ತಾತಾಪುರಂ ಮತ್ತು ಬೊಂಬಾಯಿ.

ಮದ್ರಾಸಿನ ಆಯವ್ಯಯದ ಪಟ್ಟಿ

ಅಲ್ಪ ಪ್ರಮಾಣದ ಉಳಿತಾಯ; ತೆರಿಗೆ ಕಡಿಮೆಯಾಗದು.

ವಿಮಾನ ರಕ್ಷಣಾ ಕಾರ್ಯಗಳಿಗೆ ೬೦ ಲಕ್ಷ; ಇತರ ಯೋಜನೆಗಳಿಗೆ ೪೬ ಲಕ್ಷ!

೧೯೪೨-೪೩ನೇ ಇಸ್ವಿಯ ನಮ್ಮ ಆಧಿಪತ್ಯದ ಬಜೆಟ್ ಇದೀಗ ಪ್ರಕಟವಾಗಿದೆ. ಆ ಮೇರೆಗೆ ಆಯದ ಅಂದಾಜು ರೂ. ೧೮, ೯೩, ೬೩ ಲಕ್ಷ ರೂ; ಖರ್ಚು ೧೮, ೯೪, ೨೮ ಲಕ್ಷ ರೂ; ಉಳಿತಾಯ ೩,೫೯ ಲಕ್ಷ ರೂ.

ಆದಾಯದ ದೃಷ್ಟಿಯಿಂದ ಯಾವುದಾದರೂ ತೆರಿಗೆಗಳನ್ನು ಕಡಿಮೆ ಮಾಡಬಹುದೇ, ಇಲ್ಲವೇ ವ್ಯಾಪಾರೀ ತೆರಿಗೆಗಳನ್ನು ತಾತ್ಕಾಲಿಕವಾಗಿ ಅಮಾನತು ಮಾಡಬಹುದೇ ಎಂದು ಸರಕಾರವು ಜಾಗರೂಕತೆಯಿಂದ ವಿಮರ್ಶಿಸಿದಲ್ಲಿ ಬರುವ ವರ್ಷದ ವಿದ್ಯಮಾನಗಳು ಅನಿಶ್ಚಿತವೆಂದೂ, ಆದರಿಂದ ಸಂಸ್ಥಾನದ ಉತ್ಪತ್ತಿಯ ಮೇಲೆ ವಿಪರೀತ ಪರಿಣಾಮ ಉಂಟಾಗಬಹುದೆಂದೂ, ವಿಮಾನ ರಕ್ಷಣೆಯೇ ಮೊದಲಾದ ಏರ್ಪಾಡುಗಳಿಗಾಗಿ ಈಗ ನಿರೀಕ್ಷಿಸಿದುದಕ್ಕೂ ಹೆಚ್ಚಾಗಿ ಹಣ ಒದಗಿಸಬೇಕಾಗಿ ಬರಬಹುದೆಂದೂ ಕಂಡುಬಂದಿರುವುದರಿಂದಲೂ, ಸಂಕಷ್ಟ ಪರಿಹಾರಾರ್ಥವಾಗಿಯೂ, ವಿಂಗಸಲಿಡುವ ಹಣಕ್ಕಿಂತಲೂ ಹೆಚ್ಚಿನ ದ್ರವ್ಯ ಅಗತ್ಯವಾಗಬಹುದಾದುದರಿಂದಲೂ ತೆರಿಗೆಯ ಕುರಿತಾದ ಆಲೋಚನೆಯನ್ನು ಜಟ್ಟು ಜರೂರುಯಾತಿನ ಸಂದರ್ಭಗಳಿಗಾಗಿಯೇ ಹಣವನ್ನು ಶೇಖರಿಸಿಡುವುದು ಯುಕ್ತವೆಂದು ಸರಕಾರವು ಭಾವಿಸಿದೆ.

ಈ ಬಜೆಟಿನಲ್ಲಿ ವಾಡಿಕೆಯಾದ ಭೂಕಂದಾಯದ ರಿಯಾಯಿತಿಗಾಗಿ ಅವಕಾಶ ಕಲ್ಪಿಸಲಾಗಿದೆ; ಯಾವತ್ತು ತೆರಿಗೆಗಳೂ ಹಾಗೇ ಮುಂದೆ ಸಾಗಲಿವೆ; ರಾಜಕೀಯ ಪರಿಸ್ಥಿತಿಯ ಅನಿಶ್ಚಿತ ವಿಚಾರಗಳಿಂದ ಬಂದ್ದು ಮಂತ್ರಿಮಂಡಲಕ್ಕಾಗಲೀ, ನ್ಯಾಯವಿಧಾಯಕ ಸಭೆಗಳ ಸದಸ್ಯರ ಸಂಬಳ, ಬತ್ತೆಗಳಿಗಾಗಲೀ ಪ್ರಾಂತಿಕ ಎಸೆಂಬ್ಲಿ ಚುನಾವಣೆಗಾಗಲೀ ಈ ಬಜೆಟಿನಲ್ಲಿ ಹಣ ಪ್ರತ್ಯೇಕಿಸಿಟ್ಟಿಲ್ಲ. ಆದರೆ ಮತದಾರರ ಪಟ್ಟಿ ಮತ್ತು ಲೆ॥ ಕಾ॥ ಚುನಾವಣೆಗಾಗಿ ಹಣವನ್ನು ಈ ಬಾರಿ ಒದಗಿಸಲಾಗಿದೆ.

ಆದಾಯ ತೆರಿಗೆಯ ಶಾಖೆಯಲ್ಲಿ ೧೯. ೨೦ ಲಕ್ಷದಷ್ಟು ಹೆಚ್ಚಿಗೆ ಉತ್ಪತ್ತಿಯನ್ನು ನಿರೀಕ್ಷಿಸುವಾಗ, ಪ್ರಾಂತಿಕ ಎಕ್ಸೈಜ್ ಶಾಖೆಯ ಉತ್ಪತ್ತಿ ೨೯, ೦೮ ಲಕ್ಷದಷ್ಟು ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಪೆಟ್ರೋಲನ್ನು ಮಿತಿಗೊಳಿಸಿದುದರಿಂದ ಅದರ ಮತ್ತು ಮೋಟರ್ ವಾಹನಗಳ ಮೇಲಿನ ಉತ್ಪತ್ತಿಯು ಕಡಿಮೆಯಾಗುತ್ತಿದೆ.

ಖರ್ಚಿನ ಬಾಬಿನಲ್ಲಿ ಹೆಚ್ಚಿಗೆಯಾಗಿ ಟೋಲುಗಳ ಸಂಬಂಧ ಸ್ಥಳೀಯ ಸಂಸ್ಥೆಗಳಿಗೆ ೨೨.೫೬ ಲಕ್ಷ, ಸಿಂಕಿಂಗ್ ಫಂಡಿನ ಬಗೆಗೆ ಹೆಚ್ಚಿನ ವಂತಿಗೆ ೯.೭೫ ಲಕ್ಷ, ನೆಲಗಡಲೆ ವ್ಯವಸಾಯ ಸಹಾಯಕ್ಕಾಗಿ ಕೂಡ ೫.೭೬ ಲಕ್ಷ, ಕೈಮಗ್ಗದ ನೇಕಾರರ ಸಂಕಷ್ಟ ಪರಿಹಾರಕ್ಕಾಗಿ ೧೫ ಲಕ್ಷ, ಸಿವಿಲ್ ಡಿಫೆನ್ಸ್ ರಕ್ಷಣಾಕಾರ್ಯಗಳಿಗಾಗಿ ೬೦.೧೦ ಲಕ್ಷ, ಅಷ್ಟೇ ಅಲ್ಲದೆ, ಜರೂರಿಯಾತಿನ ಪೋಲೀಸ್ ಫೌಜನ್ನು ಹೆಚ್ಚಿಸಲೂ ತಕ್ಕ ಬಜೆಟಿನಲ್ಲಿ ನಮ್ಮ
ಖರ್ಚಿನ ಚ
ರಿಂಗ್" ಜವಾಬುದಾ
ಳಿಗಿಂತ ಲಕ್ಷವನ್ನೂ, ಕ್ಷ
ಎಂದು ಒಟ್ಟಿಗೆ ೨೨.೨೩,
೧೯೪೨—೪೩ನೇ ಇಸ್ವಿಗೆ
ರಿಂಗ್" ೨೮.೫೫ ಲಕ್ಷವನ್ನೂ
೧೩.೭೭ ಲಕ್ಷವನ್ನೂ
ಲಾಗಿದೆ.

ಹತ್ತಿಯ ಬೀಜಗಳ
ಮಾಡುವ ರೈತರಿಗೆ ಹಂಚ
ಗಿಯೂ, ಸಂಚರಿಸುವ ಶಿ
ರ್ನರಿ ಆಸ್ಪತ್ರೆ ಸರ್ಜ
ನೇಮಿಸಲಿಕ್ಕಾಗಿಯೂ
ರ್ನರಿ ಆಸ್ಪತ್ರೆಗಳ
ಗಿಯೂ, ಉಣ್ಣೆಗಾಗಿ ಕುರಿ
ಲಿಕ್ಕಾಗಿಯೂ; ಗುಂಟೂರು
ಕೋಣವನ್ನು ಸಾಕುವ ಕ್ಷೇ
ತೆರೆಯಲಿಕ್ಕಾಗಿಯೂ ಈ
ಮುಂಜೂರಾಗಿದೆ. ಅನ್ನಾಮಲೈ
ವಿಶ್ವವಿದ್ಯಾನಿಲಯಗಳಿ
ವಿದ್ಯಾ ಯೋಜನೆ

(೬ನೇ ಪುಟಕ್ಕೆ ಮುಂದು

ಜೀವನೋಪಾಯವು ಹಾಳಾಗುವುದರಲ್ಲಿತ್ತು.


ನಾನು ಹೇಳುವುದೇನಂದರೆ–ಹುಂ! ಹುಂ!.....
ಬೇರೆ ಯಾರಾದರೂ ಮಾತನಾಡಲಿ!
ಕೂತ್ಕೊಳ್ಳಿ
ಸಾಕು, ನಿಲ್ಲಿಸಿ
ಅತನು ಬಹು ಚುರುಕಾಗಿದ್ದನು ಆದರೆ ಇತ್ತೀಚೆಗೆ ಅವನಿಗೆ ತ್ರಾಣವೇ ಇಲ್ಲವೆಂದು ತೋರುತ್ತದೆ
ಡಾಕ್ಟರನ್ನು ನೋಡು. ನನ್ನ ಈ ಬಳಲಿಕೆಯನ್ನು ವಾಸಿಮಾಡಿತೊಳ್ಳದಿದ್ದರೆ ನಿನ್ನ ಜೀವನೋಪಾಯವೇ ಹಾಳಾಗಬಹುದು
VOTE FOR
ನನ್ನ ಚೈತನ್ಯವೆಲ್ಲಾ ಹೋಗಿದೆ. ನನಗೆ ಯಾವಾಗಲೂ ಬಳಲಿಕೆಯಾಗಿರುತ್ತದೆ. ನಿಶ್ಚಯ ನಾನು ಡಾಕ್ಟರನ್ನು ನೋಡುವೆನು
ಮಾರನೆಯ ದಿನವೇ ಅವನು ಡಾಕ್ಟರನ್ನು ನೋಡಿದನು
ನಾನು ಬೆಳಿಗಿನ ಜಾವ ಏಳುವಾಗಲೇ ಬಳಲಿಕೆಯಿಂದ ಏಳುತ್ತೇನೆ
"ಪ್ರಾತಃಕಾಲದ ದೌರ್ಬಲ್ಯ"ವೇ ನಿನ್ನ ಈ ಬಳಲಿಕೆಗೆ ಕಾರಣ. ನೀನು ಹಗಲೆಲ್ಲಾ ವ್ಯಯಮಾಡಿದ ಚೈತನ್ಯವನ್ನು, ಪುನಃರಾತ್ರಿ ನಿದ್ರಿಸುವಾಗ ಸಂಗ್ರಹಿಸುವುದಿಲ್ಲ. ಅನೇಕವ್ಯಾಧಿಸ್ಥರ ಅನುಭವದಂತೆ ಹಾರ್ಲಿಕ್ಸ್ ಶಕ್ತಿಯನ್ನೂ ಚೈತನ್ಯವನ್ನೂ ಪುನರ್ರಚಿಸುತ್ತದೆ ಇಂದೇ ಹಾರ್ಲಿಕ್ಸ್ ಸೇವಿಸುವುದಕ್ಕೆ ಪ್ರಾರಂಭಿಸು. ನಿದ್ರಿಸುವಾಗ ನಿನಗೆ ಚೈತನ್ಯವುಂಟಾಗುವುದು
ಈಗ ನಮ್ಮ ಫೆಲ್ಲಾವಿನ ತಾಲೂಕುಗಳೆಲ್ಲಾ ಸುತ್ತಿ ಬರುವೆನು.
ಆಹಾ! ಅವನಿಗೆ ಇರುವ ಶಕ್ತಿಯಿಂದಲೂ ಚೈತನ್ಯದಿಂದಲೂ ನಿಶ್ಚಯವಾಗಿಯೂ ಜಯಶಾಲಿಯಾಗುವನು
ಹೈ-ಹೈ
ಹಾರ್ಲಿಕ್ಸ್ ಶೇಕಡ ನೂರ್ಪರಷ್ಟು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ನವಚೈತನ್ಯವಾಗಿ ಮೂರ್ಪಡಿಸುತ್ತದೆ
ಅಶಕ್ತರಾಗಿರುವಾಗ ನೀವೆದಿನವಹಿ ಸೇವಿಸುವ ಆಹಾರವು ನಿಮಗೆ ಹಿಡಿಯದಿದ್ದರೂ ನಿಮ್ಮ ಶರೀರಕ್ಕೆ ಪೋಷಣೆಯು ಅತ್ಯಾವಶ್ಯಕವೆನ್ನುವುದನ್ನು ಮರೆಯಬೇಡಿ. ಹಾರ್ಲಿಕ್ಸ್ ರೋಗಾವಸ್ಥೆಯಲ್ಲಿ ನಿಮ್ಮ ಶಕ್ತಿಯು ಕುಂದದಿರುವುದಕ್ಕೂ, ರೋಗಾನಂತರ ಗುಣಮುಖವಾಗುವುದಕ್ಕೂ ಸಹಾಯಕರವಾಗಿರುವುದು; ಕ್ಷಯಿಸಿದ ನಿಮ್ಮ ನರದ ಪರಿಗಳನ್ನು ಪುನರ್ರಚಿಸುವುದು ಮತ್ತು ನಿಮಗೆ ನವಶಕ್ತಿಯನ್ನೂ ಚೈತನ್ಯವನ್ನೂ ಉಂಟುಮಾಡುವುದು
HORLICKS
Horlicks Mixer

ನೀವು ಅಸ್ವಸ್ಥರಾಗಿರುವಾಗಲೂ, ಗುಣಹೊಂದುತ್ತಿರುವಾಗಲೂ ಅಪಾರ ಆಯಾಸದಿಂದ ಬಳಲಿ ಬೆಂಡಾಗಿದ್ದರೂ

ಹಾರ್ಲಿಕ್ಸ್ ಸೇವಿಸಿರಿ

ಅದು ನಿಮ್ಮನ್ನು "ಪ್ರಾತಃಕಾಲದ ದೌರ್ಬಲ್ಯ"ದಿಂದ ಕಾಪಾಡುತ್ತದೆ. ನೀವು ಚೆನ್ನಾಗಿ ನಿದ್ರಿಸುವಿರಿ. ನಿದ್ರೆಯಿಂದ ಉತ್ಸಾಹದಿಂದೇಳುವಿರಿ ಮತ್ತು ನಿಮ್ಮ ಚೈತನ್ಯವು ಪುನರ್ರಚಿತವಾಗುವುದು

H. 1601

ಲ್ಲಿ
ಗ ಸಹಾಯ

ುವರಿದುದು)

ಾಗಿ ಸರ್ವ ಪ್ರಯತ್ನಗ
ವುದು–ಇವೇ ಆಗಿವೆ. ನಾಗ
ಅಭಿಮಾನದಿಂದ ಸಾರ್ವ
ಸ್ಫೂರ್ತಿಯಿಂದ ಮುಂದೆ
ರಾಷ್ಟ್ರೀಯ ಯುದ್ಧ
ಯ ಮಾಡಿ, ಕೆಡು
ಎದ್ಯಮಾನಗಳನ್ನೂ
ಸುವೆನೆಂಬ ಭವಸೆ ತಮಗಿದೆ
ಸರಾಯರು ತಿಳಿಸಿದರು.

ಾಯರು ಸದ್ಯವೇ
ವಿ। ಸರ್ ಎಸ್.
ವಿಶದೀಕರಿಸಿದರು.
ಾಡಿಕೆಗಳಿಗೆ, ಅವರು
ವೇಕಪೂರ್ಣವಾದ ಬೆಂಬಲ
ನೆಂದು ಹಾರೈಸಿದರು. ನಲೇಂ
ಸರ್ ಕ್ರಿಪ್ಸರಿಗೆ ಸುಸ್ವಾಗತ
ನೆಂದು ಕೋರಿ, ಭಾರತವನ್ನು
ಾಗಿ ಮಾಡುವಲ್ಲಿ,
ತನುಮನಧನಗಳಿಂದ
ಾಡಬೇಕೆಂದು ಪ್ರಾರ್ಥಿ

ಾ-ಮದ್ರಾಸಿನ
ುವ್ಯಯದ ಪಟ್ಟಿ

ೀ ಪುಟದಿಂದ ಮುಂದುವರಿದುದು)

ರು ೧೦ ಲಕ್ಷ ಗ್ರಾಂಟು ಕೊಡು
ಂದಿಗೆ, ಮದ್ರಾಸಿನ ಕ್ವೀನ್
ಕಾಲೇಜಿನಲ್ಲಿ "ಗೃಹವಿಜ್ಞಾನ"
ಬಿ. ಎಸ್‌ಸಿ. ಅಭ್ಯಾಸಕ್ಕಾಗಿಯೂ,
ಶಾಲೆ, ಫಾರ್ಮು, ಹೊಸ್ಟೆಲು,
ಸ, ಸಾಮಗ್ರಿಗಳಿಗಾಗಿಯೂ,
ಸಂಸ್ಥೆ, ಸಾರ್ವಜನಿಕ ಪುಸ್ತಕ
ಭಂಡಾರ, ಆಟದ ಬಯಲುಗಳಿ
ಗಾಗಿಯೂ ಗ್ರಾಂಟು ಕೊಡಲಾಗಿದೆ.
ಮತ್ತೆ ವಿದ್ಯಾಭಿವೃದ್ಧಿಗಾಗಿ, ಹರಿಜನ
ವಿದ್ಯಾರ್ಥಿಗಳ ಮಧ್ಯಾಹ್ನದ ಊಟ
ತಿಂಡಿಗಾಗಿ, ಹರಿಜನರ ಉಪಯೋಗದ
ಬಾವಿ ಇತ್ಯಾದಿಗಳಿಗಾಗಿ ೨.೧೯ ಲಕ್ಷದ
ಗ್ರಾಂಟು ಮಂಜೂರಾಗಿದೆ.

ಒಟ್ಟಿನಲ್ಲಿ ಈ ಬಜೆಟಿನ ಅಂದಾಜು ಆಧಿಪತ್ಯದ ಜನಗಳನ್ನು ತೃಪ್ತಿಪಡಿಸುವು ದಾಗಿಲ್ಲವೆಂದು ಕೆಲವು ಪತ್ರಿಕೆಗಳ ಟೀಕೆ, ಹಲವು ನಿಧಿಗಳ ಏರ್ಪಾಡಿಗಾಗಿ ಕಲ್ಪಿಸಿರುವುದು; ಖರ್ಚಿನ ಬಾಬನ್ನು ಒಮ್ಮೆ ಕೆವಿನ್ಯೂವಿಗೂ, ಇನ್ನೊಮ್ಮೆ ಮೂಲ ಧನಕ್ಕೂ ಬರೆದುಕೊಳ್ಳುವುದು; ಖರ್ಚನ್ನು ಹೆಚ್ಚಾಗಿ ತೋರಿಸಿ, ಉತ್ಪತ್ತಿಯನ್ನು ಸಣ್ಣದೆಂದು ಸೂಚಿಸಿ ಹಾಗೆ ಅಡಗಿರುವ ಹಲವು ನಿಧಿಗಳಿಗಾಗಿ ಮಾರ್ಗ ಮಾಡಿಟ್ಟಿರುವುದು; ಉಳಿತಾಯವನ್ನು ನಾವು ಅಲಕ್ಷಿಸಬಹುದಾದಷ್ಟು ಚಿಕ್ಕ ಪ್ರಮಾಣದ್ದೆಂದು ಪ್ರದರ್ಶಿಸಿರುವುದು; ಇದರ ಮೇಲಿಂದ ತೆರಿಗೆ ತಗ್ಗಿಸುವುದು ಸಾಧ್ಯವಲ್ಲವೆಂದು ಸಾಧಿಸಿರುವುದು—ಇವು ಈ ಬಜೆಟಿನ ಲಕ್ಷಣಗಳೆಂದೂ ಇದರಿಂದ ತೆರಿಗೆದಾರನಿಗೆ ನ್ಯಾಯ ಮಾಡಿದ ಹಾಗಾಗಲಿಲ್ಲವೆಂದೂ ಹಲವರ ಅಭಿಮತ.

ನಾವು ರಕ್ಷಣೆಗೆ ಅರ್ಹರು ಅಪ್ಪಾ..... ಅದು ನಿನ್ನ ಕರ್ತವ್ಯ

ಆಪತ್ತು ಸನ್ನಹಿತವಾದಾಗ **ಯಾವ ಆಲೋಚನಪರ** ವ್ಯಕ್ತಿಯೂ ತನಗೆ ಅತ್ಯಂತ **ಪ್ರಿಯತಮವಾದ ವಸ್ತುಗ**ಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಆಪ್ತಭಾಂಧವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯ ಕ್ಕೀಡುಮಾಡಿ, ಸ್ವಾತಂತ್ರತೆಯನ್ನೂ ಆಸ್ತಿಪಾಸ್ತಿಗ ಳನ್ನೂ ಭಾವಿ ಭದ್ರತೆಯನ್ನೂ ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರುದಾಳಿಯನ್ನು ತಡೆಯಲು. ನಿಮ್ಮ ಶಕ್ತಿಮೀರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ ರೂ ೩/೯/- ಲಾಭ ಬರುವುದು

ಪೂರ್ತಿ ವಿವರಗಳು ಪೋಸ್ಟಾಫೀಸಿನಿಂದ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ನೀವು ಕೊಡುವ ಪ್ರತಿಯೊಂದು ಆಣೆಯೂ ಹಿಂದೂಸ್ಥಾನದ ಸೈನಿಕ, ನೌಕ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

61:79-ಗಿಂ

ಮದ್ರಾಸು ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ.

ಭಾಗ ೨

206—0—0
ಮ್ಯಾಪೌಡಿ ರಾಮಂತರಸು.

201—0—0
ಷಿಷ್ಣೀರು ಮಠದ ಶ್ರೀಮದ್ ಈಶ್ವರಾನಂದ ಭಾರತಿ ಸ್ವಾಮಿ.

175—0—0
ಹೊಸದುರ್ಗ ನಿವಾಸಿಕರು.

150—0—0
ಕಾಸರಗೋಡಿನ ಸರಕಾರಿ ಉದ್ಯೋಗಸ್ಥರು.

125—0—0
ಕುಂಬಳೆ ಗ್ರಾಮಸ್ಥರು.

106—0—0
ಬಂಬ್ರಾಣ ಕೋಚಣ್ಣ ಆಳ್ವ.

Prefer the "POPULAR" for your Life Assurance

In patronising and co-operating with this Company, you promote the success of an institution of YOUR OWN District.

THE POPULAR INSURANCE CO., LTD.,

Head Office: **MANGALORE, S. INDIA.**

and Published by B. Vittal Rau at the Kanteerava Office, Maidan North Road, Mangalore
M. Baburaya Prabhu, B. A., at the Mangalore Press, Car Street, Mangalore.